## Issue of Identity Ration Cards in Chickmagalur Town

692. **Sri C. M. S. SASTRY** (Chickmagalur).—

Will the Minister of State for Food and Civil Supplies be pleased to state :—

(*a*) the number of Identity Ration Cards issued to the public at Chickmagalur town ;

(*b*) the number of adults and children according to the identity ration cards issued ;

(*c*) the number of cards assigned to Co-operative and the number of them to private shops (Number of cards in each item) ?

**Sri B. VITHALDAS SHETTY** (Minister of State for Food and Civil Supplies).—

(*a*) 8,460.

| | | |
|---|---|---|
| (*b*) Adults | ... | 45,420 |
| Children | ... | 16,738 |
| (*c*) Co-operative Societies. | | 1,650 |
| Private Shops | | 6,810 |
| | | 8,460 |

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವಾಮಿ ಚಿಕ್ಕಮಗಳೂರು ಟೌನಿನ ಸಾರ್ವಜನಿಕರಿಗೆ ಕೊಡಲಾದ ಪಡಿತರದ ಗುರುತಿನ ಚೀಟಿಗೆ ಸಂಬಂಧಪಟ್ಟ ಹಾಗೆ ವಯಸ್ಕರು 45,420, ಮಕ್ಕಳು 16,738 ಎಂದು ಹೇಳಿದ್ದೀರಿ, ನಮ್ಮ ಚಿಕ್ಕಮಗಳೂರು ಟೌನಿನಲ್ಲಿ 1961ನೇ ಇಸವಿಯ ಸೆನ್‌ಸಸ್ ಪ್ರಕಾರ 31 ಸಾವಿರ ಜನಸಂಖ್ಯೆ ಇದೆ. ಈಗ ಸ್ವಲ್ಪ ಜಾಸ್ತಿ ಆಗಿದೆ. ಆದರೆ 62,168 ಜನಗಳಿಗೆ ರೇಷನ್ ಕೊಡುತ್ತಿದ್ದಾರೆ. ಈ ರೀತಿ ಹೆಚ್ಚಿಗೆ ರೇಷನ್ ಕೊಡುವುದು ಯಾವ ರೀತಿ ಉಪಯೋಗ ವಾಗುತ್ತದೆ ?

† ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಇದು 1961ನೇ ಇಸವಿಯ ಸೆನ್‌ಸಸ್ ಪ್ರಕಾರ ಅಲ್ಲಿ 31 ಸಾವಿರ ಜನಸಂಖ್ಯೆ ಇದೆ. ಆದರೆ ಈಗ ಸ್ವಲ್ಪ ಹೆಚ್ಚು ಕಡಿಮೆ 50 ಸಾವಿರ ಜನಸಂಖ್ಯೆ ಇರಬಹುದು. ರೇಷನ್ ಕಾರ್ಡ್‌ಗಳು ಜನ ಸಂಖ್ಯೆಗಿಂತ ಹೆಚ್ಚು ಇವೆ. ಅದಕಾರಣ ಈ ಬಗ್ಗೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಆದೇಶ ಕೊಟ್ಟಿದ್ದೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಇದು ಆಗಲೇ 2 ಸಾರಿ ಆಗಿದೆ. ಹಿಂದೆ 75 ಸಾವಿರ ಜನಗಳಿಗೆ ರೇಷನ್ ಕೊಡುತ್ತಿದ್ದರು. ಅದನ್ನು ಕಂಡುಹಿಡಿದು ಜಿಲ್ಲಾಧಿಕಾರಿಗಳಿಗೆ ತಿಳಿಸಿದಾಗ ಅವರು ಅದನ್ನು ನಿಲ್ಲಿಸಿದರು. ಈಗ ಪುನಃ 62,158 ಜನಗಳಿಗೆ ರೇಷನ್ ಕೊಡುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಇತ್ತೀಚೆಗೆ ಡೆಪ್ಯುಟಿ ಕಮೀಷನರಿಗೆ ಈ ಬಗ್ಗೆ ಆದೇಶ ಕೊಟ್ಟಿದ್ದೇವೆ. ಪ್ರತಿ ರೇಷನ್ ಕಾರ್ಡ್ ಇದ್ದವರು ಡಿಕ್ಲರೇಷನ್ ಕೊಡಬೇಕೆಂದು ಸರ್ಕಾರದವರು ಹುಕುಂ ಮಾಡಿದ್ದಾರೆ. ಈಗಾಗಲೇ ತನಿಖೆ ನಡೆಯುತ್ತಿದೆ. ಆದಷ್ಟು ಜಾಗ್ರತೆ ತನಿಖೆ ನಡೆಸಿ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಅಲ್ಲ ರೇಷನ್ ಮಿಸ್‌ಯೂಜ್ ಆಗುತ್ತಿದೆ. ಎಷ್ಟು ಜನ ಸಂಖ್ಯೆ ಇದೆಯೋ ಅಷ್ಟು ಜನಸಂಖ್ಯೆ ಕೊಡದೇ ಅದಕ್ಕೆ ಬದಲಾಗಿ ಹೆಚ್ಚಿನ ಜನಸಂಖ್ಯೆಯನ್ನು

ತೋರಿಸಿ ರೇಷನ್ ತೆಗೆದುಕೊಂಡು ಮಿಸ್‌ಯೂಜ್ ಮಾಡುತ್ತಿದ್ದಾರೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟವರ ಮೇಲೆ ಕ್ರಮತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಅದು ಮಿಸ್‌ಯೂಜ್ ಆಗಿದೆಯೇ ಇಲ್ಲವೇ ಎಂಬುದನ್ನು ರುಜುವಾತು ಮಾಡುವುದಕ್ಕೆ ಅಧಿಕಾರಿಗಳು ಇದ್ದಾರೆ. ಆದರೆ ಆ ರೀತಿ ಅನೇಕ ಜನರು ಉದ್ದೇಶ ಪೂರ್ವಕವಾಗಿ ಮಾಡಿದ್ದಾರೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಕೆಲವು ಆಫೀಸರು ಬೇರೆ ಕಡೆ ಟ್ರಾನ್ಸ್‌ಫರ್ ಆಗಿದ್ದಾರೆ. ಅಂಥವರು ಕಾರ್ಡುಗಳನ್ನು ಕೆಲವರು ಉಪಯೋಗ ಮಾಡಿಕೊಂಡಿರ ಬಹುದೆಂದು ಕಾಣುತ್ತದೆ. ಆದರೆ ಎಲ್ಲಾ ದುರುಪಯೋಗವಾಗಿದೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಜನಸಂಖ್ಯೆ ಸ್ವಲ್ಪ ಜಾಸ್ತಿ ಇದ್ದುದರಿಂದ ಸ್ವಲ್ಪ ಮಿಸ್‌ಯೂಜ್ ಆಗಿದೆ ಎಂದು ಕಾಣುತ್ತದೆ. ಆ ಬಗ್ಗೆ ಅಧಿಕಾರಿಗಳು ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ನಕಲಿ ನೌಕರರ ವರ್ಗವಾದಾಗ ಮತ್ತು ಇತರೇ ಸಂದರ್ಭಗಳಲ್ಲಿ ಸ್ವಲ್ಪ ವ್ಯತ್ಯಾಸವಾಗಬಹುದು. ಈಗಿನ ಒಂದು ಸೆನ್ಸಸ್‌ನ್ನು ತೆಗೆದುಕೊಂಡರೆ ನಮ್ಮ ಚಿಕ್ಕಮಗಳೂರು ಜಿಲ್ಲೆಯ ಜನಸಂಖ್ಯೆ 40 ಸಾವಿರಕ್ಕಿಂತ ಜಾಸ್ತಿ ಇಲ್ಲ. ಆದರೆ ಪಡಿತರದ ಗುರುತಿನ ಚೀಟಿಮೇರೆಗೆ ಲೆಕ್ಕ ನೋಡಿದರೆ 62,158 ಜನ ಇದ್ದಾರೆ. ಅಂದರೆ 22,158 ಜನಕ್ಕೆ ಜಾಸ್ತಿಯಾಗಿ ಪಡಿತರ ಕೊಡುತ್ತಿದ್ದೀರಿ. ಇದು ಸರಿಯೇ ?

ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಈಗ ಅಲ್ಲಿ 40 ಸಾವಿರ ಜನಸಂಖ್ಯೆ ಇದೆ ಎಂದು ತಾವು ಹೇಳುವುದನ್ನು ಒಪ್ಪಲಿಕ್ಕಾಗುವುದಿಲ್ಲ. 1961ರ ಸೆನ್ಸಸ್ ಪ್ರಕಾರ ಅಲ್ಲಿಯ ಜನಸಂಖ್ಯೆ 30ಸಾವಿರ ಇತ್ತು. ಇವತ್ತು ಜನಸಂಖ್ಯೆ ಎಷ್ಟು ಹೆಚ್ಚಿದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದಕ್ಕಾಗುದಿಲ್ಲ. 40 ಸಾವಿರಕ್ಕಿಂತಲೂ ಜಾಸ್ತಿ ಜನಸಂಖ್ಯೆ ಇರಬಹುದು. ಬೆಂಗಳೂರು ಸಿಟಿಯಲ್ಲಿಯೂ ಸಹ ಇದೇ ರೀತಿಯಾಗಿದೆ. ಬೇರೆ ರಾಜ್ಯಗಳಲ್ಲಿಯೂ ಸಹ ನಿರ್ದಿಷ್ಟವಾಗಿ ಪಡಿತರದ ಗುರುತಿನ ಚೀಟಿಗಳನ್ನು ಕೊಡುವುದು ಕಷ್ಟದ ಕೆಲಸವಾಗಿದೆ. ತಾವು ಹೇಳುವ ಪ್ರಕಾರ ಹೆಚ್ಚಿನ ಗುರುತಿನ ಚೀಟಿಗಳನ್ನು ಪಡೆದವರ ಮೇಲೆ ಉಗ್ರವಾದ ಕ್ರಮ ಕೈಕೊಳ್ಳುವುದು ಆಲೋಚನೆ ಮಾಡುವ ವಿಚಾರವಾದರೂ ಕೂಡ ಬಹಳ ಕಷ್ಟದ ಕೆಲಸವಾಗುತ್ತದೆಂದು ತಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

## Scarcity Conditions in some Hoblies of Sira and Gubbi Taluks

783. **Sri B. GANGANNA** (Kallambella).—

Will the Minister for Revenue be pleased to state—

(*a*) whether it has come to the notice of the Government that Kallambella and Bukkapatna Hoblies in Sira Taluk and Chelur and Hagalvadi Hoblies in Gubbi Taluk are regularly affected by scarcity;

(*b*) if so, the permanent measures suggested by the Commission appointed by the Government of India, who have toured in Tumkur District in respect of these hoblies;

(*c*) the date from which the suggestions will be put into practice ?

**Sri H. V. KOUJALGI** (Minister for Revenue).—

(*a*) Kallambella and Bukkapatna Hoblies in Sira Taluk and Hagalwadi and Chelur Hoblies of Gubbi Taluk are frequently affected by scarcity conditions on account of poor rainfall.

(*b*) No such Commission was appointed.

(*c*) Does not arise.